**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.,ಯವರ ನ್ಯಾಯಾಲಯ**
**ಟಿ.ನರಸೀಪುರ**

**ಸಿಮಿಸ್ ನಂಃ 268/2014**

**ಡಿಡಬ್ಲ್ಯೂ-1**

| | | |
|---|---|---|
| ಸಾಕ್ಷಿದಾರರ ಹೆಸರು | : | ನಂಜುಂಡಸ್ವಾಮಿ |
| ತಂದೆಯ ಹೆಸರು | : | ಲೇಟ್ ತೋಟಗಿರಿ ನಾಯಕ |
| ವಯಸ್ಸು | : | 64 ವರ್ಷ |
| ಉದ್ಯೋಗ | : | ನಿವೃತ್ತಿ |
| ವಾಸಸ್ಥಳ | : | ಮಂಡ್ಯ ಟೌನ್ |

**ಸಾಕ್ಷಿಗೆ ದಿನಾಂಕಃ 12.02.2026 ರಂದು ಪ್ರಮಾಣ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀ ಆರ್.ಎಂ. ವಕೀಲರಿಂದ :**

ಅರ್ಜಿದಾರರು ನನಗೆ ಹೆಂಡತಿಯಾಗಬೇಕು. ನನ್ನ ಮತ್ತು ಅರ್ಜಿದಾರರ ಮದುವೆ 1991 ರಲ್ಲಿ ನಮ್ಮ ಊರಾದ ಮಾಲಂಗಿಯಲ್ಲಿ ನಡೆದಿರುತ್ತದೆ. ಮದುವೆ ಆದ ಮೇಲೆ ಎರಡು ತಿಂಗಳುಗಳ ಕಾಲ ಊರಿನಲ್ಲಿ ಒಟ್ಟಾಗಿ ವಾಸವಿದ್ದೆವು. 1991 ರಲ್ಲಿ ಕೆ.ಆರ್.ಎಸ್. ನಲ್ಲಿ ಗಾರ್ಡ್ ಆಗಿ ಕೆಲಸ ಸಿಕ್ಕಿರುತ್ತದೆ. ನಾನು ಮತ್ತು ಅರ್ಜಿದಾರರು ಒಟ್ಟಾಗಿ 5 ವರ್ಷಗಳ ಕಾಲ ಇದ್ದೆವು. ಒಂದು ಗಂಡು ಮಗು ಮತ್ತು ಒಂದು ಹೆಣ್ಣು ಮಗು ಜನಿಸಿರುತ್ತದೆ. ಮಗಳಿಗೆ ಮದುವೆ ಆಗಿ ಬೆಂಗಳೂರಿನಲ್ಲಿ ವಾಸವಿರುತ್ತಾರೆ. ಮಗಳ ಮದುವೆಗೆ 2 ಲಕ್ಷ ರೂ.ಗಳನ್ನು ಖರ್ಚು ಮಾಡಿರುತ್ತೇನೆ. ಮಗನು ಖಾಸಗಿ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದಾನೆ. ಅರ್ಜಿದಾರರು ನನ್ನನ್ನು ಉಪಚರಿಸಿರುವುದಿಲ್ಲ. ಅರ್ಜಿದಾರರು ನನ್ನೊಂದಿಗೆ ಸರಿಯಾಗಿ ಇರುತ್ತಿರಲಿಲ್ಲ. ಅರ್ಜಿದಾರರು ನಾನು ಕರೆದರೂ ಸಹ ಬಂದಿರುವುದಿಲ್ಲ.

ನಂತರ ನನಗೆ ಮಂಡ್ಯ ಜಿಲ್ಲೆಗೆ ವರ್ಗಾವಣೆ ಆಗಿತ್ತು. 2014 ರಲ್ಲಿ ಅರ್ಜಿದಾರರು ಸಲ್ಲಿಸಿದ ಅರ್ಜಿಯ ಆಧಾರದ ಮೇಲೆ ಅವರಿಗೆ ಜೀವನಾಂಶವನ್ನು ನೀಡುತ್ತಿದ್ದೆನು.

(ಎದುರುದಾರರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.)

**(ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ. ಟಿ.ನರಸೀಪುರ**